ಶ್ರೀ ಬಿ.ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):

1. 25.06 ಕೋಟಿ ರೂಗಳು.

2. 42.20 ಕೋಟಿ ರೂಗಳು.

3. ಸಂಪನ್ಮೂಲಗಳನ್ನಾಧರಿಸಿ ಹಣವನ್ನು ಬಿಡುಗಡೆ ಮಾಡಲಾಗುವುದು.

ಮೀನುಗಾರಿಕೆ ಇಲಾಖಾ ವ್ಯಾಪ್ತಿಯ ರಸ್ತೆಗಳು.

566(660)

ಶ್ರೀ ಜಯಪ್ರಕಾಶ್ ಹೆಗಡೆ ಕೆ.(ಬ್ರಹ್ಮವರ): ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮೀನುಗಾರಿಕಾ ಇಲಾಖಾ ವ್ಯಾಪ್ತಿಯಲ್ಲಿನ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ? ಬಂದಿದ್ದಲ್ಲಿ ರಿಪೇರಿ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ಕ್ರಮ ಜರುಗಿಸಿರುವುದೇ?

ಆ) ಈ ಕುರಿತು ಒದಗಿಸಲಾಗಿರುವ ಹಣದ ಮೊತ್ತ ಎಷ್ಟು ಅವಶ್ಯಕತೆಗನುಗುಣವಾಗಿ ಹಣವನ್ನು ಬಿಡುಗಡೆ ಮಾಡಲಾಗಿದೆಯೇ? ಯಾವಾಗ ಈ ರಸ್ತೆಗಳ ದುರಸ್ತಿ ಕಾರ್ಯವನ್ನು ಕೈಗೊಂಡು ಮುಗಿಸಲಾಗುವುದು?

ಇ) ತೊಟ್ಟಿಲಗುಜ್ಜರ ಬೆಟ್ಟು - ಹೂಡೆ, ಕೋಟ - ಮಣೂರು, ಕೋಡಿ ಕನ್ಯಾನ ಮಣೂರು, ಕೋಡಿ-ಕೋಡಿತಲೆ, ಮಣೂರು -ಕೋಮೆ ರಸ್ತೆಗಳು ತುಂಬಾ ಹಾಳಾಗಿದ್ದು ಅವುಗಳನ್ನು ತ್ವರಿತವಾಗಿ ದುರಸ್ತಿಗೊಳಿಸಲು ಕ್ರಮ ಜರುಗಿಸುವವರೆ?

ಶ್ರೀ ಬಿ.ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):

ಅ) ಕೆಲವು ರಸ್ತೆಗಳು ಹಾಳಾಗಿವೆ.

ಅನುದಾನ ಲಭ್ಯತೆಗನುಗುಣವಾಗಿ ರಸ್ತೆಗಳ ದುರಸ್ತಿ ಕೆಲಸ ಕೈಗೊಳ್ಳಲು ಕ್ರಮ ಜರುಗಿಸಲಾಗಿದೆ.

ಆ) I) ಒದಗಿಸಲಾಗಿರುವ ಅನುದಾನ ವಿವರ ಕೆಳಕಂಡಂತಿದೆ:

1) ಮಾನುಗಾರಿಕಾ ರಸ್ತೆಗಳು : ರೂ:55 ಲಕ್ಷ

2) ಆರ್‌ಐಡಿಎಫ್ ಕಾಮಗಾರಿಗಳು : ರೂ:85 ಲಕ್ಷ

II) ಅವಶ್ಯಕತೆಗನುಗುಣವಾಗಿ ಹಾಗೂ ಅನುದಾನ ಲಭ್ಯತೆ ಅನ್ವಯ ಹಣವನ್ನು ಬಿಡುಗಡೆ ಮಾಡಲಾಗಿದೆ.

III) ಅನುದಾನ ಲಭ್ಯತೆಗನುಗುಣವಾಗಿ ರಸ್ತೆ ದುರಸ್ತಿ ಕಾರ್ಯಕೈಗೊಂಡು ಮುಗಿಸಲಾಗುವುದು.

ಇ) ಪರಿಶೀಲಿಸಿ ದುರಸ್ತಿಗೊಳಿಸಲು ಕ್ರಮ ಜರುಗಿಸಲಾಗುವುದು.

ರಾಜ್ಯದಲ್ಲಿನ ಒಳನಾಡು ಹಾಗೂ ಕರಾವಳಿ ಮೀನುಗಾರಿಕೆಯ ಸ್ಥಿತಿಗತಿಗಳು.

567(661)

ಶ್ರೀ ಜಯ ಪ್ರಕಾಶ್ ಹೆಗ್ಗಡೆ ಕೆ. (ಬ್ರಹ್ಮಾವರ): ಮಾನ್ಯ ಮಾನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಾವಳಿ ಮಾನುಗಾರಿಕೆಯಲ್ಲಿ ಮಾನುಗಳ ಲಭ್ಯತೆಯ ಬರಗಾಲ ಉಂಟಾಗಿದೆಯೇ: ಹೌದಾದಲ್ಲಿ ಅದಕ್ಕೆ ಸರ್ಕಾರದವರು ಯಾವ ರೀತಿಯ ಪರಿಹಾರವನ್ನು ಒದಗಿಸಿದ್ದಾರೆ?

ಆ) ರಾಜ್ಯದ ಯಾವ ಯಾವ ಮಾನುಗಾರಿಕಾ ಬಂದರುಗಳ ಅಭಿವೃದ್ಧಿ ಮಾಡಲಾಗಿದೆ ಮತ್ತು ಮಾಡಲು ಯೋಜನೆಗಳನ್ನು ರೂಪಿಸಲಾಗಿದೆ: ಅದಕ್ಕೆ ಕೇಂದ್ರ ಸರ್ಕಾರದ ಅನುಮೋದನೆ ದೊರೆತಿದೆಯೆ ರಾಜ್ಯ ಸರ್ಕಾರದವರು ತಮ್ಮ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಯಾವಾಗ ಕಳುಹಿಸಲು ಕ್ರಮ ಜರುಗಿಸಿದ್ದರು?

ಇ) ಒಳನಾಡು ಮಾನುಗಾರಿಕೆಯ ವಲಯದಲ್ಲಿ ಮಾನು ಮರಿಗಳ ಉತ್ಪಾದನೆ, ಮಾರಾಟ ಮತ್ತಿತರ ವಿಚಾರದಲ್ಲಿ ಸರ್ಕಾರದವರ ಕ್ರಮಗಳೇನು: ಮಾನು ಮಾರಾಟ ಹೆಚ್ಚಳಕ್ಕಾಗಿ ಯಾವ ಪ್ರೋತ್ಸಾಹ ಕ್ರಮಗಳನ್ನು ಜರುಗಿಸಲಾಗಿದೆ?